**ದಿನಾಂಕಃ 27.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ **ಪರ ಶ್ರೀ** ಎಂ ಎಸ್ **ವಕೀಲರಿಂದಃ**

ನಾನು ಯಾವುದೇ ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಸಹಿ ಮಾಡುತ್ತೇನೆ. ಆರೋಪಿಯು ನನ್ನ ಸಂಬಂಧಿಕರು ಎಂದರೆ ಸರಿ. ನಾನು ಈ ಪ್ರಕರಣದ ಆರೋಪಿಗೆ ಸೋದರ ಅತ್ತೆ ಆಗಬೇಕು ಎಂದರೆ ಸರಿ. ನಮ್ಮ ಮನೆಯಲ್ಲಿ ನಾನು, ನನ್ನ ಮಗ, ನನ್ನ ಸೊಸೆ ಮತ್ತು ಮೊಮ್ಮಕ್ಕಳು ವಾಸ ಮಾಡುತ್ತಿದ್ದೇವೆ. ನನಗೆ ಭವಾನಿ ಎಂಬ ಮಗಳು ಸಹ ಇದ್ದಾಳೆ ಎಂದರೆ ಸರಿ. ನನ್ನ ಮಗಳು ಭವಾನಿ ಮತ್ತು ಈ ಪ್ರಕರಣದ ಆರೋಪಿಯು ಸಂಬಂಧಿಕರು ಮತ್ತು ಆತ್ಮೀಯ ಸ್ನೇಹಿತರು ಎಂದರೆ ಸರಿ. ನನ್ನ ಮಗಳು ಭವಾನಿ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗಳು ಭವಾನಿ ಚೀಟಿ ವ್ಯವಹಾರ ಮಾಡುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮೂಲತಃ ವ್ಯವಸಾಯ ಮಾಡುತ್ತೇನೆ. ನನಗೆ ಸುಮಾರು 35 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ನಾನು ಭತ್ತ ಬೆಳೆಯುತ್ತೇನೆ. ನನಗೆ ವಾರ್ಷಿಕವಾಗಿ ಎಲ್ಲಾ ಖರ್ಚು ಕಳೆದು ಸುಮಾರು 20 ಸಾವಿರ ಆದಾಯ ಬರುತ್ತದೆ. ಈ ಪ್ರಕರಣದ ಆರೋಪಿಯು ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದಾರೆ. ಆರೋಪಿಗೆ ಮಾಸಿಕವಾಗಿ ಸುಮಾರು ರೂ.1,50,000/- ಸಂಬಳ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನನ್ನ ಸಂಬಂಧಿಕರಾಗಿರುವುದರಿಂದ ಆರೋಪಿಗೆ ರೂ. 1,50,000/- ಸಂಬಳ ಬರುವ ವಿಚಾರ ನನಗೆ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಆರೋಪಿಯು ನನ್ನ ಬಳಿ ಹಣವನ್ನು ಸಾಲವಾಗಿ ಪಡೆದುಕೊಳ್ಳುವ

ಸಂಧರ್ಭದಲ್ಲಿ ತನಗೆ ರೂ.40,000/- ಸಂಬಳ ಬರುತ್ತದೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ಎಷ್ಟು ಸಂಬಳ ಬರುತ್ತದೆ ಎಂದು ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ.

ನನಗೆ ಸಾಫ್ಟ್‌ವೇರ್ ಕಂಪನಿಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಆರೋಪಿಯು ನಾನು ಹೇಳಿದಂತೆ ಸಾಲವನ್ನು ಕೇಳಲು ನನ್ನನ್ನು ಮೊದಲು ಭೇಟಿ ಮಾಡಿದ ನಿರ್ದಿಷ್ಟ ದಿನಾಂಕ ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು 2021 ರಲ್ಲಿ ಭೇಟಿ ಮಾಡಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ನಮ್ಮ ಮನೆಗೆ ಬಂದು ಹಣವನ್ನು ಸಾಲವಾಗಿ ಕೇಳಿದ್ದರು. ಆರೋಪಿಯು ನನ್ನನ್ನು ಭೇಟಿ ಮಾಡಿದಾಗ ಬೇರೆ ಯಾರು ಹಾಜರಿರಲಿಲ್ಲ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಮತ್ತು ಸಾಕ್ಷ್ಯ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ. ದಿನಾಂಕ 09.10.2021 ರಂದು ಆರೋಪಿಯು ನನ್ನನ್ನು ಭೇಟಿ ಮಾಡಿ ರೂ. 1,20,000/-ಹಣವನ್ನು ಸಾಲವಾಗಿ ಕೇಳಿದ್ದರು ಆದರೆ ನಾನು ರೂ.1,10,000/-ಹಣವನ್ನು ಸಾಲವಾಗಿ ನೀಡಿರುತ್ತೇನೆ. ಸದರಿ ರೂ 1,10,000/-ಹಣವನ್ನು ನಾನು ದಿನಾಂಕ 28.09.2021 ರಂದು ಆರೋಪಿಗೆ ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡುವಾಗ ನನ್ನನ್ನು ಹೊರತು ಪಡಿಸಿ ಬೇರೆ ಯಾರೂ ಹಾಜರಿರಲಿಲ್ಲ. ಸದರಿ ಹಣವನ್ನು ನಾನು ಬ್ಯಾಂಕ್ ನಲ್ಲಿ ಇಟ್ಟಿದ್ದೆನು. ಸದರಿ ರೂ.1,10,000/-ಹಣವನ್ನು ಬ್ಯಾಂಕ್ ನಿಂದ ಡ್ರಾ ಮಾಡಿದ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ಮುಂದುವರೆದು ನಾನು ಬ್ಯಾಂಕ್ ನಿಂದ ಹಣ ಡ್ರಾ ಮಾಡಿದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಸದರಿ ರೂ.1,10,000/-ಹಣವನ್ನು ಜನವರಿ ತಿಂಗಳಿನಲ್ಲಿ ವಾಪಸ್ಸು ಮಾಡುತ್ತೇನೆ ಎಂದು ನನ್ನಿಂದ ಪಡೆದುಕೊಂಡಿದ್ದರು. ಆರೋಪಿಯು ತಾನು ಕಂಪನಿ ಮಾಡುತ್ತೇನೆ ಎಂದು ತಿಳಿಸಿ ನನ್ನ ಬಳಿ ಹಣವನ್ನು ಸಾಲವಾಗಿ ಕೇಳಿದ್ದರು. ಆರೋಪಿಯು ಯಾವ ಕಂಪನಿ ಮಾಡುತ್ತಾರೆ ಎಂಬುದರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಯು

ದಿನಾಂಕ 30.11.2021 ರಂದು ನನಗೆ ಚೆಕ್ ಅನ್ನು ನೀಡಿರುತ್ತಾರೆ. ಸಾಕ್ಷಿದಾರರು ಮುಂದುವರೆದು ಆರೋಪಿಯು ನನ್ನನ್ನು ಭೇಟಿ ಮಾಡಿ ಕಂಪನಿ ಮಾಡಲು ಹಣ ಸಾಕಾಗುತ್ತಿಲ್ಲ ಎಂದು ಹೇಳಿ ಆರೋಪಿಯು ನಮ್ಮ ಮನೆಯಲ್ಲಿಯೇ ಒಂದು ವಾರ ಉಳಿದುಕೊಂಡಿದ್ದರು ಮತ್ತು ಆ ಸಮಯದಲ್ಲಿ ದಿನಾಂಕ 30.09.2021 ರಂದು ರೂ.1,45,000/-ಹಣವನ್ನು, ದಿನಾಂಕ 26.11.2021 ರಂದು ರೂ.40,000/-ಹಣವನ್ನು ಮತ್ತು ದಿನಾಂಕ 30.11.2021 ರಂದು ರೂ.1,76,000/-ಹಣವನ್ನು ಆರೋಪಿಯು ನನ್ನಿಂದ ಸಾಲವಾಗಿ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮೇಲ್ಕಂಡಂತೆ ತಿಳಿಸಿದ ಹಣವು ನನ್ನ ಬ್ಯಾಂಕ್ ಖಾತೆಯಲ್ಲಿ ಇತ್ತು. ಸಾಕ್ಷಿದಾರರು ಮುಂದುವರೆದು ನಾನು 34 ಗುಂಟೆ ಜಮೀನನ್ನು ಮಾರಾಟ ಮಾಡಿದ್ದರಿಂದ ಸದರಿ ಹಣವು ನನಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮೇಲ್ಕಂಡಂತೆ ತಿಳಿಸಿದ ಹಣವು ನನ್ನ ಬ್ಯಾಂಕ್ ಖಾತೆಯಲ್ಲಿ ಇತ್ತು ಎಂದು ತೋರಿಸಲು ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ಜಮೀನು ಮಾರಾಟ ಮಾಡಿದ ಹಣವನ್ನು ಆರೋಪಿಗೆ ನೀಡಿದ್ದೇನೆ ಎಂಬ ವಿಚಾರವನ್ನು ನಾನು ನನ್ನ ಪಿರ್ಯಾದಿಯಲ್ಲಿ ಮತ್ತು ಪ್ರಮಾಣೀಕೃತ ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ.

ದಿನಾಂಕ 28.09.2021 ರಿಂದ ಇಲ್ಲಿಯವರೆಗೂ ನಾನು ಆರೋಗ್ಯವಾಗಿ ಇದ್ದೇನೆ. ಸಾಕ್ಷಿದಾರರು ಮುಂದುವರೆದು ಸದರಿ ಮಧ್ಯದಲ್ಲಿ ಸುಮಾರು 15 ದಿನಗಳ ಕಾಲ ಹುಷಾರಿರಲಿಲ್ಲ ಎಂದು ನುಡಿಯುತ್ತಾರೆ. 2022 ರ ಏಪ್ರಿಲ್ ನಲ್ಲಿ ನನಗೆ ಆರೋಗ್ಯ ಹದಗೆಟ್ಟಿರುತ್ತದೆ. ಏಪ್ರಿಲ್ ತಿಂಗಳಿನಲ್ಲಿ ಯಾವ ದಿನಾಂಕ ನನಗೆ ಆರೋಗ್ಯ ತಪ್ಪಿತ್ತು ಎಂದು ನಿರ್ದಿಷ್ಟವಾಗಿ ಗೊತ್ತಿಲ್ಲ. ಸದರಿ ಆರೋಗ್ಯ ಸರಿಯಿಲ್ಲದ ಸಂಧರ್ಭದಲ್ಲಿ ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ. ಸದರಿ ಸಂಧರ್ಭದಲ್ಲಿ ನಾನು ವೈಧ್ಯರ ಬಳಿ ಹೋಗಿ ಚಿಕಿತ್ಸೆ ಪಡೆದುಕೊಂಡು ಮನೆಗೆ ಬರುತ್ತಿದ್ದೆನು.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ